## ಹಣದ ಬದಲು...

ಕನ್ನಡದಲ್ಲಿ ಎಂ.ಎ. ಓದುತ್ತಿದ್ದ ವಿದ್ಯಾಧರ ಅಂದು ಬಹಳೇ ವಿಚಲಿತನಾಗಿದ್ದ. ಅವನನ್ನು ಕಂಡು ಗೆಳೆಯರ ಗುಂಪಿನ ಉತ್ಸಾಹವೆಲ್ಲಾ ಇಳಿಯಿತು. ಗೆಳೆಯ ಮಹೇಶ, 'ಯಾಕಯ್ಯಾ ಇಷ್ಟೊಂದು ಚಿಂತಾಕ್ರಾಂತನಾಗಿ ಕುಳಿತಿದ್ದೀಯ. ಇವತ್ತು ರಾತ್ರಿ ಸಿನಿಮಾಕ್ಕೆ ಹೋಗಿ ಮಜಾ ಮಾಡಿ ಬರೋಣ ಅಂತ ಹೇಳಿದ್ದೆ? ಏನಾಯಿತು?' ಎಂದು ಕೇಳಿದ. ವಿದ್ಯಾಧರ, 'ಎಲ್ಲಾ ಎಡವಟ್ಟಾಯ್ತು ಕಣ್ರೊ... ಎಂಜಾಯ್ ಮಾಡೋಕೆ ಹಣ ಕಳಿಸಿ ಅಂದ್ರೆ ನಮ್ಮಪ್ಪ ಕಳಿಸ್ತಾನಾ? ಅದಕ್ಕೇ ಕನ್ನಡ ನಿಘಂಟು ಖರೀದಿಸಬೇಕಾಗಿದೆ. ಹಣ ಕಳುಹಿಸಿ ಅಂತ ಪತ್ರ ಬರೆದಿದ್ದೆ...' 'ಅದಕ್ಕೆ?' ಎಲ್ಲರೂ ಒಟ್ಟಿಗೇ ಕೇಳಿದರು. ವಿದ್ಯಾಧರ ಸಿಡಿಮಿಡಿಗೊಳ್ಳುತ್ತ ಹೇಳಿದ, 'ಅದಕ್ಕೆ ಅವರು ಹಣದ ಬದಲು ಕನ್ನಡ ನಿಘಂಟನ್ನೇ ಖರೀದಿಸಿ ಕಳುಹಿಸಿಬಿಟ್ಟಿದ್ದಾರೆ'.

**ಎಂ.ಕೆ.ಮಂಜುನಾಥ್**



---



## ಕಾಲ ಬಂದಾಗ

ಸರ್ಕಾರಿ ಶಾಲೆಯಲ್ಲಿ 5ನೇ ತರಗತಿ ಓದುತ್ತಿದ್ದ ತಾರಾ ತುಂಬಾ ಚೂಟಿಯಾಗಿದ್ದಳು. ಆದರೆ ಆ ಪರೀಕ್ಷೆಯಲ್ಲಿ ಎಲ್ಲಾ ಪ್ರಶ್ನೆಗಳಿಗೆ ಸರಿಯಾದ ಉತ್ತರ ಬರೆದು, ಮೂರು ಪ್ರಶ್ನೆಗಳಿಗೆ 'ಕಾಲ ಬಂದಾಗ ಉತ್ತರಿಸುತ್ತೇನೆ' ಎಂದು ಬರೆದಿದ್ದಳು. ಮೇಷ್ಟು ಅವಳನ್ನು ಕರೆದು,'ಹೀಗಂದ್ರೆ ಏನು?' ಎಂದು ಕೇಳಿದರು. ತಾರಾ, 'ಆ ಮೂರು ಪ್ರಶ್ನೆಗಳಿಗೆ ಉತ್ತರ ಗೊತ್ತಿರಲಿಲ್ಲ ಸರ್, ಮನೆಯಲ್ಲಿ ನಮ್ಮಮ್ಮ ನಮ್ಮ ಅಜ್ಜಿಗೆ ಯಾವಾಗಲೂ ಕಾಲ ಬಂದಾಗ ಎಲ್ಲದಕ್ಕೂ ಉತ್ತರಿಸುತ್ತೇನೆ ಅಂತ ಹೇಳುತ್ತಿರುತ್ತಾರೆ. ಅದಕ್ಕೇ ಹಾಗೆ ಬರೆದೆ' ಎಂದಾಗ ಮೇಷ್ಟು ದಂಗು ಬಡಿದವರಂತೆ ನಿಂತೇ ಇದ್ದರು.

**ಅನುಪಮಾ ವಿ.ಎಸ್**